ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್

## ಸಂವಹನ ಮತ್ತು ಸಾಮರ್ಥ್ಯ ಅಭಿವೃದ್ಧಿ ಘಟಕ

ಸಂಖ್ಯೆ : ಗ್ರಾಅಪ/ರಾನೀನೈಮಿ/ಸಂ.ಸ್ವ.ಆಂ./ಶಿ25/2011-12/2013-14/583. ದಿನಾಂಕ : 15.02.2014

**ರವರಿಗೆ,**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್, ರಾಮನಗರ.

ಮಾನ್ಯರೇ,

**ವಿಷಯ:** ನಿರ್ಮಲ ಭಾರತ ಅಭಿಯಾನ ಯೋಜನೆಯಡಿ ಹೆಚ್ಚುವರಿ ಅನುದಾನ ಬಿಡುಗಡೆ ಕುರಿತು.

**ಉಲ್ಲೇಖ:** ಪತ್ರ ಸಂಖ್ಯೆ.ರಾಜಿಪಂ/ಡಿ.ಆರ್.ಡಿ.ಎ/ನಿಭಾಅ/ಅನುದಾನ/2013-14 ದಿ.3.1.2014

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದನ್ವಯ ನಿರ್ಮಲ ಭಾರತ ಅಭಿಯಾನ ಯೋಜನೆಯಡಿ 2013-14ನೇ ಸಾಲಿಗೆ ಜಿಲ್ಲಾ ವಾರ್ಷಿಕ ಕ್ರಿಯಾ ಯೋಜನೆಯಂತೆ ಲಭ್ಯವಿರುವ ಅನುದಾನ ಹೊರತುಪಡಿಸಿ ರೂ.300.00 ಲಕ್ಷಗಳನ್ನು ಬಿಡುಗಡೆಗೊಳಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆ. ಸಲ್ಲಿಸಿರುವ ವೆಚ್ಚದ ವಿವರ ಈ ಕೆಳಕಂಡಂತಿರುತ್ತದೆ.

**ರೂ. ಲಕ್ಷಗಳಲ್ಲಿ**

| ಆರಂಭಿಕ ಶಿಲ್ಕು (12-13ನೇ ಸಾಲಿನ 2ನೇ ಕಂತಿನ ಅನುದಾನ ಬಿಡುಗಡೆ ಸೇರಿದಂತೆ) | ಜಿಲ್ಲೆ ಸಲ್ಲಿಸಿದ ಆನ್‌ಲೈನ್ ವರದಿಯಂತೆ ವೆಚ್ಚ ಜನವರಿ-2014 | ಉಳಿಕೆ | % |
|---|---|---|---|
| **501.73** | **240.72** | **285.46** | **48** |

ಮೇಲಿನಂತೆ ಪತದಲ್ಲಿ ಆರಂಭಿಕ ಶಿಲ್ಕು ರೂ.59.49 ಲಕ್ಷಗಳೆಂದು ಸೂಚಿಸಿದ್ದು, 2012-13ನೇ ಸಾಲಿನಲ್ಲಿ ಸಲ್ಲಿಸಿರುವ ಆಡಿಟ್ ವರದಿಯಂತೆ ರೂ.199.36 ಲಕ್ಷಗಳಿರುತ್ತದೆ. ವ್ಯತ್ಯಾಸ ರೂ.139.87 ಲಕ್ಷಗಳಿಗೆ ವಿವರಣೆ ಸಲ್ಲಿಸಬೇಕಾಗಿರುತ್ತದೆ. ಡಿಸೆಂಬರ್-2013 ರ ಅಂತ್ಯಕ್ಕೆ 11049 ವೈಯಕ್ತಿಕ ಗೃಹ ಶೌಚಾಲಯಗಳು ನಿರ್ಮಾಣಗೊಂಡಿದ್ದು, ಮಾರ್ಚ್-14ರವರೆಗೆ 3500 ಶೌಚಾಲಯಗಳನ್ನು ನಿರ್ಮಿಸುವುದಾಗಿ ತಿಳಿಸಲಾಗಿರುತ್ತದೆ.

ಪರಿಶೀಲಿಸಿದಂತೆ ರೂ.327.79 ಲಕ್ಷಗಳನ್ನು ಗ್ರಾ.ಪಂ.ಗಳಿಗೆ ಬಿಡುಗಡೆಯಾಗಿರುವುದಾಗಿ ತಿಳಿಸಿದ್ದು, ಸದರಿ ಅನುದಾನವನ್ನು ಬಳಸಿಕೊಂಡು ಫಲಾನುಭವಿಗಳಿಗೆ ಪ್ರೋತ್ಸಾಹಧನ ನೀಡಿರುವುದಕ್ಕೆ ಗ್ರಾಮ ಪಂಚಾಯತಿಯಿಂದ ಹಣಬಳಕೆ ಪ್ರಮಾಣ ಪತ್ರ ತೆಗೆದುಕೊಂಡು ಕೇಂದ್ರ ಸರ್ಕಾರದ ಯೋಜನೆಯ ವೆಬ್‌ಸೈಟ್‌ನಲ್ಲಿ ಭೌತಿಕ ಹಾಗೂ ಆರ್ಥಿಕ ಪ್ರಗತಿ ದಾಖಲಿಸಿದ್ದಲ್ಲಿ ಅಥವಾ ಆನ್‌ಲೈನ್‌ನಲ್ಲಿ ದಾಖಲಿಸಲು ಸಾಧ್ಯವಿಲ್ಲದಿದ್ದರೆ ಅನುದಾನ ಬಳಕೆಯಾಗಿರುವ ಕುರಿತು ದೃಢೀಕರಿಸಿ ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸಬೇಕಾಗಿರುತ್ತದೆ ಎಂಬ ಅಂಶವನ್ನು ಗಮನಕ್ಕೆ ತರಲಾಗಿದೆ.

ತಮ್ಮ ವಿಶ್ವಾಸಿ,

for **ಮಿಷನ್ ನಿರ್ದೇಶಕರು**
ರಾ.ನೀ.ನೈ.ಸಂಸ್ಥೆ ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿಗಳು,
ಗ್ರಾ ಅ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು :
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ.ಪಂ.ರಾಜ್ ಇಲಾಖೆ ರವರ ಮಾಹಿತಿಗಾಗಿ.

2ನೇ ಮಹಡಿ, ಕೆ.ಹೆಚ್.ಬಿ. ಬಿಲ್ಡಿಂಗ್, ಕಾವೇರಿಭವನ, ಬೆಂಗಳೂರು - 560 009.
ದೂರವಾಣಿ/ ಫ್ಯಾಕ್ಸ್ :-22221862 E-mail : wsrdpr@gmail.com